ದಿನಾಂಕ 13-10-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಐ.ಕೆ.ಹೆಚ್ ವಕೀಲರಿಂದಃ**

1. ಈ ದಾವೆಯನ್ನು ನಾನು ಮತ್ತು ನನ್ನ ತಾಯಿ ಹುಸೇನಾಬಿ ಜಾಲಗಾರ ರವರು ಸಲ್ಲಿಸಿರುತ್ತೇವೆ. ನಿ.ಪಿ-1 ರ ಪಹಣಿ ಪತ್ರಿಕೆಯಲ್ಲಿ ವಾದಿಯ ಜೊತೆಗೆ 8 ಜನ ವಗೈರೆರುಎಂದು ನಮೂದು ಇದ್ದು, ಅವರು ನನ್ನ ಅಣ್ಣ ತಮ್ಮಂದಿರಿದ್ದು ಅವರ ಹೆಸರುಗಳೆಂದರೆ ಅಬೀದವುಲ್ಲಾ ಅಹಮದ್ ಸಾಬ್ ಜಾಲೆಗಾರ, ನಹೀಮುಲ್ಲಾ ಅಹಮದ್ ಸಾಬ್ ಜಾಲೆಗಾರ, ಇಮ್ತಿಯಾಜ್ ಅಹಮದ್ ಸಾಬ್ ಜಾಲೆಗಾರ, ಶಾಜೀದ್ ಅಹಮದ್ ಸಾಬ್ ಜಾಲೆಗಾರ, ಗುಲ್ಫರಾಜ್ ಅಹಮದ್ ಸಾಬ್ ಜಾಲೆಗಾರ, ನೌಶಾದ್ ಅಹಮದ್ ಸಾಬ್ ಜಾಲೆಗಾರ, ಮುದರ್ ಸರ್ ಅಹಮದ್ ಸಾಬ್ ಜಾಲೆಗಾರ ರವರು ಇರುತ್ತಾರೆ. ದಾವಾ ಆಸ್ತಿಗೆ ನಾನು, 1 ನೇ ವಾದಿ ಮತ್ತು ಮೇಲಿನ ಸದರಿ ನನ್ನ ಸಹೋದರರರನ್ನು ಹೊರತುಪಡಿಸಿ ಬೇರೆ ಯಾರಿಗೂ ಹಕ್ಕು ಇರುವುದಿಲ್ಲ. ಸದರಿ ನನ್ನ ಸಹೋದರರು ಬಹಳಷ್ಟು ಜನ ಆಗಿದ್ದರಿಂದ ಈ ದಾವೆಯಲ್ಲಿ ವಾದಿಯರನ್ನಾಗಿ ಸೇರಿಸಿರುವುದಿಲ್ಲ.

2. ದಾವಾ ಆಸ್ತಿಯ ಸ ನಂಃ 327. ದಾವಾ ಆಸ್ತಿಯು ನಮಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿರುತ್ತದೆ. ಮೂಲತಃ ದಾವಾ ಆಸ್ತಿಯನ್ನು ಮಂಜೂರು ಮಾಡುವಂತೆ ಕೋರಿ ಭೂ ನ್ಯಾಯ ಮಂಡಳಿಗೆ ಫಾರಂ ನಂ. 7 ರ ಅರ್ಜಿಯನ್ನು ನನ್ನ ತಂದೆ ಅಹಮ್ಮದ್ ಸಾಬ್ ಜಾಲೀಗಾರ ರವರು ಸಲ್ಲಿಸಿದ್ದರು. ಭೂ ನ್ಯಾಯ ಮಂಡಳಿಯು ನಮ್ಮ ತಂದೆಗೆ 6 ಎಕರೆ 37 ಗುಂಟೆ ಜಮೀನನ್ನು ಮಂಜೂರು ಮಾಡಿರುತ್ತಾರೆ.

3. ಸ ನಂಃ 327 ರ ಜಮೀನಿಗೆ ಸಂಬಂಧಿಸಿದಂತೆ ರಾಜಪ್ಪ ಹುಲ್ಲಪ್ಪ ಸುಣಗಾರ ಎಂಬುವವರು ಸಹ ಜಮೀನನ್ನು ಮಂಜೂರು ಕೋರಿ ಭೂ ನ್ಯಾಯ ಮಂಡಳಿಗೆ

ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಸ ನಂಃ 327/2 ವಿಸ್ತೀರ್ಣ 1 ಎಕರೆ 20 ಗುಂಟೆಯನ್ನು ಭೂ ನ್ಯಾಯ ಮಂಡಳಿಯು ರಾಜಪ್ಪ ತಂದೆ ಹುಲ್ಲಪ್ಪ ಸುಣಗಾ ಮತ್ತು ಆತನ ಸಹೋದರರಾದ ನಿಂಗಪ್ಪ ತಂದೆ ಹುಲ್ಲಪ್ಪ ಸುಣಗಾರ ಇವರಿಗೆ ಜಂಟಿ ಅಧಿಬೋಗದಾರಿಕೆ ಹಕ್ಕನ್ನು ನೀಡಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಸದರಿ 1 ಎಕರೆ 20 ಗುಂಟೆ ಕ್ಷೇತ್ರವು ನನ್ನ ಸ್ವಾಧೀನದಲ್ಲಿಯೇ ಇದೆ ಎಂದು ನುಡಿಯುತ್ತಾರೆ. ಸ ನಂಃ 324/2 ಮತ್ತು ಸ ನಂಃ 327/2 ರ ಜಮೀನಿನಲ್ಲಿ 1 ಎಕರೆ 20 ಗುಂಟೆ ಕ್ಷೇತ್ರವನ್ನು ಭೂ ನ್ಯಾಯ ಮಂಡಳಿಯು ಸದರಿ ಇಬ್ಬರೂ ಸಹೋದರರಿಗೆ ಜಂಟಿಯಾಗಿ ಮಂಜೂರು ಮಾಡಲಾಗಿದೆ ಎಂದರೆ ಗೊತ್ತಿಲ್ಲ.

4. ರಾಜಪ್ಪ ಮತ್ತು ನಿಂಗಪ್ಪ ತಂದೆ ಹುಲ್ಲಪ್ಪ ಸುಣಗಾರ ರವರುಗಳ ನಡುವೆ ಹಿಸ್ಸೇಯ ಕುರಿತು ದಾವೆ ನಡೆದಿತ್ತು ಎಂದರೆ ಗೊತ್ತಿಲ್ಲ. ಸ ನಂಃ 324/2 ಮತ್ತು ಸ ನಂಃ 327/2 ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಲಯ, ಹಾನಗಲ್ಲ ಇಲ್ಲಿ ಅಸಲು ದಾವಾ ಸಂಃ 141/2016 ಮತ್ತು ಎಫ್.ಡಿ.ಪಿ ಸಂಃ 2/2010 ರಂತೆ ಪ್ರಕರಣಗಳು ನಡೆದಿರುವ ಬಗ್ಗೆ ನನಗೆ ಗೊತ್ತಿಲ್ಲ. ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ಮೇಲ್ಮನವಿ ಸಂಖ್ಯೆಗಳಾದ ಆರ್.ಎಸ್.ಎ ಸಂಃ 5875/2010 ಮತ್ತು 5776/2010 ರ ಪ್ರಕರಣಗಳು ಚಾಲ್ತಿಯಲ್ಲಿದ್ದಾಗ ಸದರಿ ಸಹೋದರರ ನಡುವೆ ರಾಜೀ ಆಗಿತ್ತು ಎಂದರೆ ಗೊತ್ತಿಲ್ಲ. ಸದರಿ ರಾಜಿಯಂತೆ ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು, ಹಾನಗಲ್ಲ ರವರಲ್ಲಿ ಅಂತಿಮ ಡಿಕ್ರಿಯನ್ನು ಪಡೆದುಕೊಳ್ಳಲು ಎಫ್.ಡಿ.ಪಿ ಸಂಃ 2/2010 ನ್ನು ದಾಖಲಿಸಿ, ಸದರಿ ಪ್ರಕರಣದಲ್ಲಿ ಸದರಿ ಜಮೀನುಗಳನ್ನು ಅಳತೆ ಮಾಡಿ ವಿಂಗಡಿಸಲು ಎ.ಡಿ.ಎಲ್.ಆರ್, ಹಾನಗಲ್ಲ ರವರು ಬಂದಿದ್ದರು ಎಂದರೆ ಗೊತ್ತಿಲ್ಲ.

5. ಸದರಿ ಎಫ್.ಡಿ.ಪಿ ಪ್ರಕರಣದಲ್ಲಿ ಸ ನಂಃ 327/2 ವಿಸ್ತೀರ್ಣ 1 ಎಕರೆ 20 ಗುಂಟೆ ಜಮೀನನ್ನು ರಾಜಪ್ಪ ತಂದೆ ಹುಲ್ಲಪ್ಪ ಸುಣಗಾರ ರವರ ಸ್ವಾಧೀನಕ್ಕೆ ನ್ಯಾಯಾಲಯದ ಕಮೀಷನರ್ ರವರು ನೀಡಿರುತ್ತಾರೆ ಎಂದರೆ ಸರಿಯಲ್ಲ. ಸ ನಂಃ 327/2 ಕ್ಷೇತ್ರ 1 ಎಕರೆ 20 ಗುಂಟೆ ಜಮೀನಿನ ಉತ್ತರ ದಿಕ್ಕಿಗೆ ನಮ್ಮ ಸ್ವಾಧೀನದಲ್ಲಿ ಇರುವ ಜಮೀನು ಮತ್ತು ಸದರಿ 1 ಎಕರೆ 20 ಗುಂಟೆ ಜಮೀನನ್ನು ಬೇರ್ಪಡಿಸಲು ಟ್ರಂಚನ್ನು ತೆಗೆಯಲಾಗಿದೆ ಎಂದರೆ ಸರಿಯಲ್ಲ. ಸದರಿ ಎಫ್.ಡಿ.ಪಿ ಪ್ರಕರಣದಲ್ಲಿ ನ್ಯಾಯಾಲಯದ ಕಮೀಷನರ್ ರವರು ದಾವಾ ಆಸ್ತಿಗೆ ಭೇಟಿ ನೀಡಿ ರಾಜಪ್ಪ ಅವರಿಗೆ ಬಂದಿದ್ದ 1 ಎಕರೆ 20 ಗುಂಟೆ ಜಮೀನನ್ನು ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ, ಟ್ರಂಚನ್ನು ಮಾಡಿಸಿ ಸ್ವಾಧೀನಕ್ಕೆ ನೀಡಿರುತ್ತಾರೆ ಎಂದರೆ ಸರಿಯಲ್ಲ.

6. ನಮ್ಮ ಜಮೀನಿಗೆ ಹೊಂದಿಕೊಂಡಂತೆ ಇರುವ ಸ ನಂಃ 327/2 ಕ್ಷೇತ್ರ 1 ಎಕರೆ 20 ಗುಂಟೆ ಜಮೀನಿನಲ್ಲಿ ರಾಜಪ್ಪ ತಂದೆ ಹುಲ್ಲಪ್ಪ ಸುಣಗಾರ ರವರು ಮಾವಿನ ಮರ ಮತ್ತು ಅಡಿಕೆ ಗಿಡಗಳನ್ನು ಬೆಳೆಸಿದ್ದಾರೆ ಎಂದರೆ ಸಾಕ್ಷಿಯು ನಾವು ಬೆಳೆಸಿದ್ದೇವೆ ಎಂದು ನುಡಿಯುತ್ತಾರೆ. ಸ ನಃ 327/2 ಕ್ಷೇತ್ರ 1 ಎಕರೆ 20 ಗುಂಟೆ ಜಮೀನನ್ನು ಪ್ರತಿವಾದಿಗಳು ರಾಜಪ್ಪ ತಂದೆ ಹುಲ್ಲಪ್ಪ ಸುಣಗಾರ ರವರಿಂದ ಖರೀದಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಸದರಿ ಜಮೀನಿಗೆ ಹೊಂದಿಕೊಂಡಂತೆ ಇರುವ ಸ ನಂಃ 324/2 ಕ್ಷೇತ್ರ 6 ಎಕರೆ 30 ಗುಂಟೆ ಜಮೀನನ್ನು ಸಹ ಪ್ರತಿವಾದಿಗಳು ರಾಜಪ್ಪ ತಂದೆ ಹುಲ್ಲಪ್ಪ ಸುಣಗಾರ ರವರಿಂದ ಖರೀದಿಸಿರುತ್ತಾರೆ ಎಂದರೆ ಗೊತ್ತಿಲ್ಲ.

7. ಸದರಿ ಖರೀದಿ ವ್ಯವಹಾರಗಳಿಗೆ ಸಂಬಂಧಿಸಿದಂತೆ ದಿಃ 05-02-2019 ರಂದು ಖರೀದಿ ಕರಾರು ಪತ್ರ ಆಗಿರುತ್ತದೆ ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ನಮ್ಮ ಜಮೀನಿನ ಉಸ್ತುವಾರಿಯನ್ನು ತೆಗೆದುಕೊಂಡಿರುವುದರಿಂದ ಅವರನ್ನು ಈ ದಾವೆಯಲ್ಲಿ ಪಕ್ಷಕಾರ ರನ್ನಾಗಿ ಮಾಡಿರುತ್ತೇನೆ. ನ್ಯಾಯಾಲಯದ ಕೋರ್ಟ ಕಮೀಷನರ್ ಮತ್ತು

ಬೇಲೀಫ್ ರವರು ಅಳತೆ ಮಾಡಿ ಸ ನಂಃ 327/2 ಕ್ಷೇತ್ರ 1 ಎಕರೆ 20 ಗುಂಟೆ ಜಮೀನನ್ನು ರಾಜಪ್ಪ ರವರಿಗೆ ನೀಡಿದ ಸ್ವಾಧೀನದಂತೆ ಪ್ರತಿವಾದಿಗಳು ಅದನ್ನು ಖರೀದಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಖರೀದಿ ಕರಾರು ಆದ ದಿನದಿಂದಲೂ 1 ಎಕರೆ 20 ಗುಂಟೆ ಕ್ಷೇತ್ರವು ಪ್ರತಿವಾದಿಗಳ ಮಾಲಿಕತ್ವ ಮತ್ತು ಸ್ವಾಧೀನದಲ್ಲಿ ಇದೆ ಎಂದರೆ ಸರಿಯಲ್ಲ.

8. ಈ ದಾವೆಯನ್ನು ಸ ನಂಃ 327/1 ರ ಒಟ್ಟು ಕ್ಷೇತ್ರವಾದ 6 ಎಕರೆ 37 ಗುಂಟೆ ಪೈಕಿ 12 ಗುಂಟೆಗೆ ಮಾತ್ರ ಸಲ್ಲಿಸಿದ್ದೇನೆ. ಸದರಿ ಒಟ್ಟು ಕ್ಷೇತ್ರವಾದ 6 ಎಕರೆ 37 ಗುಂಟೆ ಜಮೀನು ಸಂಪೂರ್ಣ ನನ್ನ ಮತ್ತು ತಾಯಿ ಹಾಗೂ ಸಹೋದರರ ಸ್ವಾಧೀನದಲ್ಲಿದೆ ಎಂದರೆ ಸರಿ. 6 ಎಕರೆ 37 ಗುಂಟೆ ಜಮೀನನ್ನು ಹೊರತುಪಡಿಸಿ ದಾವಾ ಜಮೀನಾದ 12 ಗುಂಟೆ ಜಮೀನು ಪ್ರತ್ಯೇಕ ಜಮೀನಾಗಿರುತ್ತದೆ. ಸದರಿ 12 ಗುಂಟೆ ಜಮೀನಿನ ಸ ನಂಃ 326. ಸ ನಂಃ 326 ರ ಜಮೀನಿನ ಪಹಣಿ ಪತ್ರಿಕೆಯನ್ನು ನಾನು ಹಾಜರು ಪಡಿಸಿರುವುದಿಲ್ಲ. ನಿ.ಪಿ-4 ರ ಹದ್ದುಬಸ್ತು ನಕ್ಷೆಯನ್ನು ಯಾರು ನೀಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿ.ಪಿ-4 ರ ಹದ್ದುಬಸ್ತು ನಕ್ಷೆಯನ್ನು ತಯಾರಿಸಲು ನಾನೇ ಅರ್ಜಿಯನ್ನು ನೀಡಿರುತ್ತೇನೆ. ಸ ನಂಃ 327 ರ ಜಮೀನಿನ ಹಿಡುವಳಿದಾರರು ನಾವುಗಳು ಎಂದರೆ ಸರಿ. ನಾನು ಹೇಳುವ 12 ಗುಂಟೆ ಜಮೀನಿಗೆ ವಹಿವಾಟು ಮಾಡಲು ಪ್ರತಿವಾದಿಗಳು ತೊಂದರೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

9. ದಾವಾದಾಸ್ತಿಯನ್ನು ಅಳತೆ ಮಾಡಲು ಸರ್ವೇ ಅಧಿಕಾರಿಗಳು ನಮಗೆ ಯಾವುದೇ ಪೂರ್ವ ನೋಟೀಸನ್ನು ನೀಡದೇ ಬಂದಿದ್ದರಿಂದ ನಾವು ಅಳತೆ ಮಾಡಲು ತಕರಾರು ಮಾಡಿ ಈ ದಾವೆಯನ್ನು ಸಲ್ಲಿಸಿರುತ್ತೇನೆ. ಈ ದಾವೆಯನ್ನು ಸಲ್ಲಿಸಲು ಕಾರಣವು ಯಾವ ದಿನಾಂಕದಲ್ಲಿ ಉಂಟಾಗಿರುತ್ತದೆ ಎಂದು ಗೊತ್ತಿಲ್ಲ. ಈ ದಾವೆಯನ್ನು ದಾಖಲು ಮಾಡಲು ಕಾರಣಗಳು ಉಂಟಾಗಿಲ್ಲದೇ ಇದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ

ಸರಿಯಲ್ಲ. ದಾವಾ ಶೆಡ್ಯೂಲ್ ಜಮೀನನ್ನು ಅಳತೆ ಮಾಡಲು ನಾನು ಅರ್ಜಿಯನ್ನು ಸಲ್ಲಿಸಿದ್ದೆ. ಅಳತೆ ಮಾಡಲು ಸಲ್ಲಿಸಿದ್ದ ಅರ್ಜಿಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸ ನಂಃ 327 ರ ಜಮೀನಿಗೆ ಸಂಬಂಧಿಸಿದಂತೆ ಅರ್ಜಿಯನ್ನು ನೀಡಿರುತ್ತೇನೆ. ಸ ನಂಃ 327/2 ಕ್ಷೇತ್ರ 1 ಎಕರೆ 20 ಗುಂಟೆ ಜಮೀನನ್ನು ಖರೀದಿಸಿ ದಂತೆ ಪ್ರತಿವಾದಿಗಳು ಖರೀದಿ ಪತ್ರದಂತೆ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ನಾನು ಆದರಿಸಿರುವ ದಾವಾ ಆಸ್ತಿಯು ನಮ್ಮ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸ ನಂಃ 327/1 ರ ಜಮೀನಲ್ಲಿ ನನಗೆ ಸೇರಿದ 6 ಎಕರೆ 37 ಗುಂಟೆ ಮಾತ್ರ ಜಮೀನು ಇದ್ದು, ನಾನು ಹೇಳುವಂತೆ ಹೆಚ್ಚುವರಿ 12 ಗುಂಟೆ ಕ್ಷೇತ್ರವು ನನ್ನ ಸ್ವಾಧೀನದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಆದರಿಸಿರುವ ಸ ನಂಃ 327/1 ಕ್ಷೇತ್ರ 6 ಎಕರೆ 37 ಗುಂಟೆ ಹೊರತುಪಡಿಸಿ ಸ ನಂಃ 327/2 ರ ಜಮೀನಿನ ಕ್ಷೇತ್ರ 1 ಎಕರೆ 20 ಗುಂಟೆ ಪ್ರತಿವಾದಿಯರ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಾದ 12 ಗುಂಟೆ ಜಮೀನು ಅಸ್ತಿತ್ವದಲ್ಲಿ ಇಲ್ಲದೇ ಇದ್ದರೂ ಸಹ ಸುಳ್ಳು ಸಂಗತಿಗಳ ಮೇಲೆ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

10. ದಾವಾ ಆಸ್ತಿಯ ಪೂ-ಅಗಸರ ರವರಿಗೆ ಸೇರಿದ ಸ ನಂಃ 325 ರ ಜಮೀನು, ಪ- ಪ್ರತಿವಾದಿಗಳಿಗೆ ಸೇರಿದ ಸ ನಂಃ 324 ರ ಜಮೀನು, ಉ-ಸ ನಂಃ 327 ರ ಉಳಿಕೆ ಜಮೀನು ಮತ್ತು ದ-ಸ ನಂಃ324 ರ ಜಮೀನು ಇದೆ. ನಾನು ಆದರಿಸುವ ಮಾವಿನ ಗಿಡಗಳು ಮತ್ತು ಮರಗಳು ಪ್ರತಿವಾದಿಯರು ಬೆಳೆಸಿದ ಮತ್ತು ಅವರ ಸ್ವಾಧೀನದಲ್ಲಿ ಇರುವ ಮರಗಳು ಎಂದರೆ ಸರಿಯಲ್ಲ. ನಾನು ಆದರಿಸಿರುವಂತೆ ದಾವಾ ಆಸ್ತಿಯು ಅಸ್ತಿತ್ವದಲ್ಲಿ ಇಲದೇ ಇರುವುದರಿಂದ ಅದರ ವಹಿವಾಟು ಮತ್ತು ಉಪಯೋಗಕ್ಕೆ ತೊಂದರೆ ನೀಡುವ ಪ್ರಸಂಗ ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ಆದರಿಸಿರುವ ದಾವಾ ಶೆಡ್ಯೂಲ್ ಆಸ್ತಿಯಾದ 12 ಗುಂಟೆ ಜಮೀನು ಪ್ರತಿವಾದಿಗಳಿಗೆ ಸೇರಿದ ಸ ನಂಃ 327/2 ರ ಕ್ಷೇತ್ರ 1 ಎಕರೆ 20 ಗುಂಟೆಯಲ್ಲಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ ಎಂದು
ಒಪ್ಪಿರುತ್ತಾರೆ.
Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ
ಹಾನಗಲ್ಲ.

ಸಾಕ್ಷಿದಾರರ ಸಹಿ